ಅ) ಬಂದಿದೆ. ದಿನಾಂಕ 31-3-1999ರಲ್ಲಿದ್ದಂತೆ ನಷ್ಟದ ಪ್ರಮಾಣ ರೂ. 8,49,19,323.91.

ಆ) ಮೂಲ ಬಂಡವಾಳ - ರೂ. 3,25,59,549.00 (ದುಡಿಯುವ ಬಂಡವಾಳ)

ಕೊಡಬೇಕಾದ ಹಣ

ರೈತರಿಗೆ - ರೂ. 4,00,44,508.00

ಕಾರ್ಮಿಕರಿಗೆ - ರೂ. 1,28,43,219.00

ಒಟ್ಟು - ರೂ. 5,28,87,727.00

ಇ) ಕಾರ್ಖಾನೆಗೆ ಸರ್ಕಾರವು ದಿ:27-12-2000ರಲ್ಲಿ ರೂ. 6.00 ಕೋಟಿ ಸಾಲ ಪಡೆಯಲು ಗ್ಯಾರೆಂಟಿ ನೀಡಿರುವುದು ಅದರಲ್ಲಿ ಮೈಸೂರು ಜಿಲ್ಲಾ ಕೇಂದ್ರೀಯ ಸಹಕಾರ ಬ್ಯಾಂಕಿನಿಂದ ರೂ. 1.5 ಕೋಟಿ ಬಿಡುಗಡೆಯಾಗಿದೆ. ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಿಂದಲೂ ಸಹ ರೂ. 1.5 ಕೋಟಿ ಸಾಲ ಮಂಜೂರಾಗಿದ್ದು, ಹಣ ಇನ್ನು ಬಿಡುಗಡೆಯಾಗಬೇಕಾಗಿದೆ.

ಈ) ಸರ್ಕಾರದ ವತಿಯಿಂದ ಅವಶ್ಯವಿರುವ ಬೆಂಬಲ ನೀಡುವುದು. ಆಡಳಿತಾಧಿಕಾರಿಯ ಅವಧಿಯು ದಿ: 25-5-2001ಕ್ಕೆ ಅಂತ್ಯಗೊಳ್ಳಲಿದ್ದು, ಈ ಅವಧಿಯೊಳಗಾಗಿ ಚುನಾವಣೆ ನಡೆಸಲು ಆಡಳಿತಾಧಿಕಾರಿಗಳು ಕ್ರಮವಿಡುವರು.

ಪಿರಿಯಾಪಟ್ಟಣ ತಾಲ್ಲೂಕು ಬೆಟ್ಟದಪುರ ಗ್ರಾಮಕ್ಕೆ ಆನೆಗಳು ನುಗ್ಗದಂತೆ ಕಂದಕ ತೆಗೆಯುವುದು.

519: (584)

ಶ್ರೀ ಹೆಚ್.ಸಿ.ಬಸವರಾಜು (ಪರಿಯಾಪಟ್ಟಣ) : ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕಿನ ಅರಣ್ಯ ಪ್ರದೇಶದಲ್ಲಿ ಎಷ್ಟು ಭಾಗದಲ್ಲಿ ಕಂದಕ ತೆಗೆಯಲಾಗಿದೆ. ಇನ್ನೂ ಎಷ್ಟು ಭಾಗದಲ್ಲಿ ಕಂದಕ ತೆಗೆಯಬೇಕಾಗಿದೆ?

ಆ) ಕಂದಕ ತೆಗೆಯಲಾಗಿದ್ದರೂ ಸಹ ಬೆಟ್ಟದಪುರ ಗ್ರಾಮಕ್ಕೆ ಆನೆ ನುಗ್ಗಿ ಅಪಾರ ಹಾನಿ ಮಾಡಿರುವುದಲ್ಲದೆ ಒಬ್ಬ ವ್ಯಕ್ತಿಯನ್ನು ಬಲಿ ತೆಗೆದುಕೊಂಡಿರುವುದು ಸರ್ಕಾರದ

ಗಮನಕ್ಕೆ ಬಂದಿದೆಯೆ?

ಇ) ಬಂದಿದ್ದಲ್ಲಿ, ಪರಿಹಾರ ಕಾರ್ಯವನ್ನು ಕೈಗೊಳ್ಳಲಾಗಿದೆಯೆ? ಮುಂದೆ ಈ ರೀತಿಯ ಘಟನೆಗಳು ಮರುಕಳಿಸದಂತೆ ಸರ್ಕಾರ ಹಾಕಿಕೊಂಡಿರುವ ಯೋಜನೆಗಳಾವುವು?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಹುಣಸೂರು ಪ್ರಾದೇಶಿಕ ಅರಣ್ಯ ವಿಭಾಗಕ್ಕೆ ಸಂಬಂಧಿಸಿದಂತೆ ಪಿರಿಯಾಪಟ್ಟಣ ವಲಯದ ಆನೆಚೌಕೂರು ಮತ್ತು ದೊಡ್ಡಹರವೆ ಅರಣ್ಯ ಪ್ರದೇಶದಲ್ಲಿ 1998-99ನೇ ಸಾಲಿನಲ್ಲಿ 25 ಕಿ.ಮಿ. ಮತ್ತು 1999-2000ನೇ ಸಾಲಿನಲ್ಲಿ 9 ಕಿ.ಮಿ. ಒಟ್ಟು 34 ಕಿ.ಮಿ. ಉದ್ದದ ಆನೆ ದಾಟದಂತಹ ಕಂದಕವನ್ನು ತೆಗೆಯಲಾಗಿದೆ. ಹೀಗೆ ತೆಗೆಯಲಾಗಿರುವ ಆನೆ ದಾಟದಂತಹ ಕಂದಕವು ಪಿರಿಯಾಪಟ್ಟಣ ವಲಯಕ್ಕೆ ಸೇರಿದ ಅರಣ್ಯ ಪ್ರದೇಶದ ಶೇ.95ರಷ್ಟನ್ನು ಒಳಗೊಂಡಿರುತ್ತದೆ.

ಪಿರಿಯಾಪಟ್ಟಣ ವಲಯದ ಆನೆಚೌಕೂರು ಸಿಪಿಟಿ-1ರಲ್ಲಿ ಇನ್ನು 4. ಕಿ.ಮಿ. ದೂರದ ಆನೆ ದಾಟದಂತಹ ಕಂದಕ ತೆಗೆಯಬೇಕಾಗಿರುವುದು ಬಾಕಿ ಇದ್ದು, ಈ ಕಾಮಗಾರಿಯನ್ನು 2001-02ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು ಪೂರ್ಣಗೊಳಿಸಲಾಗುವದು.

ಆ) ದಿನಾಂಕ:20-1-2001ರಂದು ಎರಡು ಕಾಡಾನೆಗಳು ಮಡಿಕೇರಿ ವಿಭಾಗದ ಸೋಮವಾರಪೇಟೆ ವಲಯಕ್ಕೆ ಸೇರಿದ ಹೆಬ್ಬಾಲಿ ಕಣಿವೆ ಪ್ರದೇಶದ ಕಡೆಯಿಂದ ಪಿರಿಯಾಪಟ್ಟಣ ವಲಯಕ್ಕೆ ಸೇರಿದ ಕೊಣಸೂರಿಗೆ ಬಂದು ನಂತರ ಅಲ್ಲಿಂದ ಬೆಟ್ಟದಪುರ ಗ್ರಾಮಕ್ಕೆ ಬಂದಿರುತ್ತದೆ. ಈ ವಿಷಯವನ್ನು ತಿಳಿದ ತಕ್ಷಣ ಹುಣಸೂರಿನಿಂದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಇತರ ವಲಯ ಅರಣ್ಯ ಅಧಿಕಾರಿ, ಸಿಬ್ಬಂದಿ ವರ್ಗದವರೊಂದಿಗೆ ಪಿರಿಯಾಪಟ್ಟಣ ವಲಯದ ವಲಯಾರಣ್ಯಾಧಿಕಾರಿ ಮತ್ತು ಸಿಬ್ಬಂದಿವರ್ಗದವರು ಸ್ಥಳಕ್ಕೆ ಧಾವಿಸಿ ಸದರಿ ಆನೆಗಳನ್ನು ಮರಳಿ ಕಾಡಿಗೆ ಓಡಿಸುವ ಸಲುವಾಗಿ ಶ್ರಮಿಸುತ್ತಿರುವಾಗ್ಗೆ ಆನೆಗಳನ್ನು ನೋಡಲು ಬಂದಿದ್ದ ಸುತ್ತಮುತ್ತಲಿನ ಗ್ರಾಮದ ಸಾವಿರಾರು ಸಂಖ್ಯೆಯ ಜನರಿದ್ದು, ಅವರುಗಳನ್ನು ದೂರ ಹೋಗಲು ತಿಳಿಸಿದಾಗ್ಯೂ, ಜನರ ಗುಂಪು ಎಷ್ಟು ಹೇಳಿದರೂ ಕೇಳದೆ ಆನೆಗಳನ್ನು ಹಿಂಭಾಗದಿಂದ ಓಡಿಸಿಕೊಂಡು ಹೋಗುತ್ತಿದ್ದಾಗ, ಕಾಡಾನೆಯು ಹಿಂದಕ್ಕೆ ತಿರುಗಿ ಸುಮಾರು 18 ವರ್ಷ ವಯಸ್ಸಿನ ಶ್ರೀ ರಮೇಶ್ ಬಿನ್ ಶ್ರೀ ಜವರಶೆಟ್ಟಿ ಎಂಬುವವರನ್ನು ಹಿಡಿದು ತುಳಿದಿರುತ್ತದೆ. ಹೀಗೆ ಆನೆಯಿಂದ ಹತ್ಯೆಗೊಳಗಾದ ವ್ಯಕ್ತಿಯನ್ನು ಪಿರಿಯಾಪಟ್ಟಣ ತಾಲ್ಲೂಕು, ಬೆಟ್ಟದಪುರ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ

ಚಿಕಿತ್ಸೆ ಮಾಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ತೆಗೆದುಕೊಂಡು ಹೋಗುತ್ತಿರುವಾಗ್ಗೆ ಮಾರ್ಗಮಧ್ಯದಲ್ಲಿ ಮೃತಪಟ್ಟಿರುತ್ತಾರೆ. ನಂತರ ಹುಣಸೂರಿನ ಉಪ ಅರಣ್ಯ ಸಂರಕ್ಷಣಾಧಿಕಾರಿಯವರೂ ಸಹ ಸ್ಥಳಕ್ಕೆ ಭೇಟಿ ನೀಡಿ ಸಿಬ್ಬಂದಿಗಳಿಗೆ ಸೂಕ್ತ ಸಲಹೆ ನೀಡಿ, ಆನೆಗಳನ್ನು ಪುನಃ ಯಾವುದೇ ಹಾನಿಯಾಗದಂತೆ ಕಾಡಿಗೆ ಓಡಿಸಲು ಕ್ರಮ ಕೈಗೊಳ್ಳಲಾಗಿದೆ. ಹೀಗೆ ಗ್ರಾಮಕ್ಕೆ ನುಗ್ಗಿ ಬಂದಿದ್ದ ಆನೆಗಳಿಂದ ಒಬ್ಬ ವ್ಯಕ್ತಿ ಮೃತಪಟ್ಟಿರುವುದು ಹೊರತುಪಡಿಸಿ, ರೈತರು ಮತ್ತು ಸಾರ್ವಜನಿಕರ ಆಸ್ತಿಪಾಸ್ತಿಗೆ ಯಾವುದೇ ನಷ್ಟವಾಗಿರುವುದಿಲ್ಲ ಹಾಗೂ ಬೆಳೆ ಹಾನಿಯಾಗಿರುವುದಿಲ್ಲ.

ಇ) ಮೃತಪಟ್ಟ ವ್ಯಕ್ತಿಯ ತಾಯಿಗೆ ತಕ್ಷಣದ ಪರಿಹಾರವಾಗಿ ಇಲಾಖೆಯಿಂದ 25,000-00 ರೂ.ಗಳ ಪರಿಹಾರ ಧನವನ್ನು ನೀಡಲಾಗಿದೆ. ಸರ್ಕಾರದ ಆದೇಶದ ಪ್ರಕಾರ ಉಳಿದ 75,000-00 ರೂ.ಗಳ ಪರಿಹಾರಧನ ನೀಡುವ ಸಲುವಾಗಿ ಮೇಲಧಿಕಾರಿಗಳಿಗೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅವರಿಂದ ಹಣ ಬಿಡುಗಡೆಯಾದ ಕೂಡಲೇ ಬಾಕಿ ನೀಡಬೇಕಾದ 75,000-00 ರೂ.ಗಳ ಪರಿಹಾರಧನವನ್ನು ನೀಡಲಾಗುವುದು.

ಮುಂದೆ ಇದೇ ರೀತಿ ಆನೆಗಳು ಕಾಡಿನಿಂದ ಗ್ರಾಮಗಳಿಗೆ ನುಗ್ಗಿ ಬರುವುದನ್ನು ತಡೆಗಟ್ಟುವ ಸಲುವಾಗಿ ಸಿಬ್ಬಂದಿ ವರ್ಗದವರನ್ನು ಜಾಗೃತಿಯಾಗಿ ಇಟ್ಟುಕೊಳ್ಳಲಾಗಿದೆ. ಅಲ್ಲದೆ ಪಿರಿಯಾಪಟ್ಟಣ ವಲಯಕ್ಕೆ ಸಂಬಂಧಿಸಿದಂತೆ ಬಾಕಿ ತೆಗೆಯಬೇಕಾಗಿರುವ ಆನೆ ದಾಟದಂತಹ ಕಂದಕವನ್ನು ತೆಗೆಯಲು 2001-2002ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಕಾಮಗಾರಿ ಅಳವಡಿಸಿಕೊಂಡು ಆನೆ ದಾಟದಂತಹ ಕಂದಕವನ್ನು ತೆಗೆದು ಪೂರ್ಣಗೊಳಿಸಲಾಗುವುದು.

ಗಿರಿಜನರಿಗೆ ನೀಡಲಾಗುತ್ತಿದ್ದ ಬಿದಿರು ಹಾಗೂ ಇತರೆ ಸೌಲಭ್ಯಗಳು.

520(585)

ಶ್ರೀ ಹೆಚ್.ಸಿ.ಬಸವರಾಜು(ಪಿರಿಯಾಪಟ್ಟಣ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಗ್ರಾಮೀಣ ಪ್ರದೇಶಗಳಲ್ಲಿ ಗಿರಿಜನರಿಗೆ ಹಾಗೂ ಮೇದಾರರಿಗೆ ನೀಡಲಾಗುತ್ತಿದ್ದ ಬಿದಿರು ಹಾಗೂ ಇತರೆ ಸೌಲಭ್ಯಗಳನ್ನು ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಇದಕ್ಕೆ ಕಾರಣಗಳೇನು?

2) ಇವರಿಗೆ ಸೌಲಭ್ಯಗಳನ್ನು ಮತ್ತೆ ವಿತರಿಸುವ ಯೋಜನೆ ಸರ್ಕಾರದ ಮುಂದೆ